ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ಬಿಡುಗಡೆಯಾದ ಹಣದ ವಿವರ (ರೂ. ಲಕ್ಷಗಳಲ್ಲಿ)	
			2004–05	2005–06
28	ಹಾವೇರಿ	ರಾಣೇಬೆನ್ನೂರು	221.25	79.50
29		ಬ್ಯಾಡಿಗಿ	247.25	221.00
30		ಹಿರೇಕೆರೂರು	273.07	212.62
31		ಹಾವೇರಿ	195.07	139.10
32		ಸವಣೂರು	351.25	341.00
33		ಶಿಗ್ಗಾಂವ್	247.25	149.00
34	ಧಾರವಾಡ	ಧಾರವಾಡ	115.00	25.00
35		ಹುಬ್ಬಳ್ಳಿ	303.00	87.00
36		ಕಲ್ಘಟಗಿ.	0	0
37		ಕುಂದಗೋಳ	200.00	75.00
38		ನವಲಗುಂದ	234.00	46.00

586 (912) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) : ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಂತೇಮರಳ್ಳಿ ವಿಧಾನಸಭಾ ಕ್ಷೇತ್ರ ಕೇಂದ್ರ ಸ್ಥಾನದಲ್ಲಿದ್ದು ಇಲ್ಲಿ ಜಾನುವಾರು ಮತ್ತು ತರಕಾರಿ ಮಾರುಕಟ್ಟೆಗೆ ಯಾವ ಸೌಲಭ್ಯವಿರುವುದಿಲ್ಲ;

ಆ) ಆದ ಕಾರಣ, ರೈತರ ಸಂತೆಯನ್ನು ಸಂತೇಮರಳ್ಳಿ ಕೇಂದ್ರದಲ್ಲಿ ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು) :

ಅ) ಸಂತೇಮರಳ್ಳಿಯಲ್ಲಿ 17.12.1975 ರಲ್ಲಿ ಉಪ ಮಾರುಕಟ್ಟೆಯನ್ನು ಸ್ಥಾಪಿಸಿದ್ದು, 20,5 ಎಕರೆ ಜಮೀನಿನಲ್ಲಿ ಪ್ರಾಂಗಣ ಅಭಿವೃದ್ಧಿಪಡಿಸಿ, ಆಹಾರ ಧಾನ್ಯಗಳು, ತರಕಾರಿಗಳು, ಜಾನುವಾರು ವ್ಯಾಪಾರ ವಹಿವಾಟಿಗಾಗಿ ಸೌಕರ್ಯಯಗಳನ್ನು ಕಲ್ಪಿಸಲಾಗಿದೆ.

ಆ) ರೈತರ ಸಂತೆಯ ಯಶಸ್ಸು ಗ್ರಾಹಕರನ್ನು ಅವಲಂಬಿಸಿದೆ. ರೈತರ ಸಂತೆ ಸ್ಥಾಪನೆ ಬಗ್ಗೆ ಸಾಧ್ಯ ಸಾಧ್ಯತೆ ಪರಿಶೀಲಿಸಲು ಸಮೀಕ್ಷೆ ಕೈಗೊಂಡು ಆದರೆ ವರದಿ ಆಧರಿಸಿ, ಸೂಕ್ತ ಕ್ರಮ ಜರುಗಿಸಲಾಗುವುದು.

587 (913) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) : ಮಾನ್ಯ ಮುಜರಾಯಿ ಹಾಗೂ ಮೀನುಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಾಮರಾಜನಗರ ಜಿಲ್ಲೆಗೆ ಕಳೆದ ಮೂರು ಸಾಲಿನಲ್ಲಿ ಆರಾಧನ ಯೋಜನೆಯಲ್ಲಿ ಬಿಡುಗಡೆಯಾದ ಹಣವೆಷ್ಟು; (ಕ್ಷೇತ್ರವಾರು ವಿವರ ನೀಡುವುದು)?